**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ನಾಗರತ್ನ | ಪಿಡಬ್ಲ್ಯು- 14 |
| ಗಂಡನ ಹೆಸರು | - ರಾಜಶೇಖರ್ | ಸಿ ಡಬ್ಲ್ಯು 25 |
| ವಯಸ್ಸು | - 45 ವರ್ಷ | |
| ಉದ್ಯೋಗ | - ಮಹಿಳಾ ಪೇದೆ, ಗ್ರಾಮಾಂತರ ಪೊಲೀಸ್ ಠಾಣೆ, ಚಿಕ್ಕಮಗಳೂರು | |
| ವಾಸ ಸ್ಥಳ | - ಚಿಕ್ಕಮಗಳೂರು | |

*(*ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 28-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ನಾನು 2021 ರಿಂದ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 19-11-2021 ರಂದು ಈ ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳಾದ ಚಾಸಾ.39 ರವರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಅವರ ಆದೇಶದ ಮೇರೆಗೆ ನಾನು ಇಲಾಖೆಯಿಂದ ಠಾಣೆಗೆ ಒದಗಿಸಲಾಗಿದ್ದ ಸೋನಿ ಹ್ಯಾಂಡಿ ಕ್ಯಾಮೆರದಲ್ಲಿ ಫೋಟೋಗಳನ್ನು ತೆಗೆದಿದ್ದೇನೆ ಮತ್ತು ವಿಡಿಯೋ ಚಿತ್ರಿಕರಿಸಿದ್ದೇನೆ.

3. ನಂತರ ದಿಃ 19-11-2021 ರಂದು ತನಿಖಾಧಿಕಾರಿಗಳ ಆದೇಶದ ಮೇರೆಗೆ ಸದರಿ ಕ್ಯಾಮೆರದಲ್ಲಿದ್ದ ಫೋಟೋಗಳನ್ನು ಮತ್ತು ವಿಡಿಯೋವನ್ನು ಹ್ಯಾಂಡಿ ಕ್ಯಾಮ ಮೆಮೋರಿ ಕಾರ್ಡ ಮೂಲಕ ಠಾಣೆಯಲ್ಲಿದ್ದ ಕಂಪ್ಯೂಟರ್ ಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿದೆನು. ಸದರಿ ಕಂಪ್ಯೂಟರ್ ಗೆ ವರ್ಗಾಯಿಸಿದ ಫೋಟೋಗಳು ಮತ್ತು ವಿಡಿಯೋವನ್ನು ಸಿಡಿಗೆ ವರ್ಗಾಯಿಸಲು ಸಾಧ್ಯವಾಗದ ಕಾರಣ ಕಂಪ್ಯೂಟರ್ ನಲ್ಲಿದ್ದ ವಾಟ್ಸಪ್ ವೆಬ್ ಮುಖಾಂತರ ಸದರಿ ಫೋಟೋ ಮತ್ತು ವಿಡಿಯೋಗಳನ್ನು ನನ್ನ ಮೊಬೈಲಿಗೆ ಕಳುಹಿಸಿಕೊಂಡು ನಂತರ ಸದರಿ ಫೋಟೋ ಮತ್ತು ವಿಡಿಯೋಗಳನ್ನು ಠಾಣೆಯಲ್ಲಿದ್ದ ಇನ್ನೊಂದು ಕಂಪ್ಯೂಟರ್ ಗೆ ಬ್ಲೂಟೂತ್ ಮೂಲಕ ವರ್ಗಾಯಿಸಿ ನಂತರ ಅವುಗಳನ್ನು ಒಂದು ಖಾಲಿ ಸಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿರುತ್ತೇನೆ. ಸದರಿ ಫೋಟೋ ಮತ್ತು ವಿಡಿಯೋಗಳನ್ನು ಚಿತ್ರಿಕರಿಸಿದ ಕ್ಯಾಮೆರ ಮತ್ತು ಅವುಗಳನ್ನು ವರ್ಗಾಯಿಸಿದ ಸಾಧನಗಳು ಸುಸ್ಥಿತಿಯಲ್ಲಿ ಇದ್ದವು.

ನಂತರ ಆ ಬಗ್ಗೆ ಅದೇ ದಿನ ಅಂದರೆ ದಿನಾಂಕ 19-11-2021 ರಂದು ನಾನು ತನಿಖಾಧಿಕಾರಿಗಳಿಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ.

4. ಸದರಿ ಸಿಡಿ ಮತ್ತು ದೃಢೀಕರಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ, ಆತನ ಪರ ವಕೀಲರು ಮತ್ತು ವಿಶೇಷ ಸರ್ಕಾರಿ ಅಭಿಯೋಜಕರ ಸಮಕ್ಷಮ ಒಂದು ಸಿಡಿಯನ್ನು ನ್ಯಾಯಾಲಯದ ತಂತ್ರಜ್ಞರ ಸಹಾಯದಿಂದ ಕಂಪ್ಯೂಟರಿಗೆ ಅಳವಡಿಸಿ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಮೇಲೆ ಹೇಳಿದಂತೆ ನಾನು ತೆಗೆದು ಪೋಟೋಗಳು ಮತ್ತು ಚಿತ್ರೀಕರಿಸಿದ ವಿಡೀಯೋ ಕಂಡು ಬರುವುದಾಗಿ ನುಡಿದಿರುತ್ತಾರೆ. ಸದರಿ ಸಿಡಿಯನ್ನು ನಿಪಿ.34 ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ರಡಿಯಲ್ಲಿ ನೀಡಲಾದ ದೃಢೀಕರಣ ಪತ್ರವನ್ನು ನಿಪಿ.35 ಎಂದು ಅದರಲ್ಲಿರುವ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

5. ನನಗೆ ಫೋಟೋಗಳನ್ನು ತೆಗೆಯುವ ಬಗ್ಗೆ ಮತ್ತು ಅವುಗಳನ್ನು ಕಂಪ್ಯೂಟರ್ ಗೆ ವರ್ಗಾಯಿಸುವ ಬಗ್ಗೆ ಮತ್ತು ಕಂಪ್ಯೂಟರ್ ನಿಂದ ಸಿಡಿ ಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

6. ನಾನು ಮೇಲೆ ಹೇಳಿದಂತೆ ಕ್ಯಾಮೆರದಲ್ಲಿ ತೆಗೆದಿದ್ದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.3 ರಿಂದ ನಿಪಿ.5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಗುರುತಿಸಿ ಮೇಲೆ ಹೇಳಿದಂತೆ ನಾನು ಕ್ಯಾಮೆರದಲ್ಲಿ ತೆಗೆದು ಸಿಡಿಗೆ ವರ್ಗಾಯಿಸಿದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ.

7. ನಂತರ ತನಿಖಾಧಿಕಾರಿಗಳ ಆದೇಶದ ಮೇರೆಗೆ ದಿಃ 29-11-2021 ರಂದು ಪ್ರಾಸಾ.12 ರವರಿಗೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡಲು ಅವರನ್ನು ಕಬ್ಬಿನಹಳ್ಳಿ ಗ್ರಾಮದ ಕಬ್ಬಿನಹಳ್ಳಿ ಎಸ್ಟೇಟಿಗೆ ಕರೆದುಕೊಂಡು ಸದರಿ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದೇನೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

8. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಫೋಟೋಗಳನ್ನು ಮತ್ತು ವಿಡಿಯೋವನ್ನು ಸಿಡಿಗೆ ವರ್ಗಾಯಿಸಲು ನೀವು ಕೈಗೊಂಡ ಪ್ರಕ್ರಿಯೆಯನ್ನು ನಿಪಿ.35 ರಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಕೈತಪ್ಪಿನಿಂದ ತಿಳಿಸಿಲ್ಲ ಎನ್ನುತ್ತಾರೆ.

ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಫೋಟೋಗಳನ್ನು ಕ್ಯಾಮೆರದಲ್ಲಿ ತೆಗೆಯಲಾಗಿದೆ ಎಂದು ತಿಳಿಸಿದ್ದೀರಿ ಎಂದರೆ ಸರಿ. ಕಲಂ 65(ಬಿ) ಯಾವ ಕಾಯ್ದೆಯಡಿಯಲ್ಲಿ ಬರುತ್ತದೆ ಎಂದರೆ ಸಾಕ್ಷಿ ಭಾರತೀಯ ಸಾಕ್ಷ್ಯ ಅಧಿನಿಯಮದಡಿ ಎನ್ನುತ್ತಾರೆ.

9. ನಿಮಗೆ ನಿಮ್ಮ ಪರಿಣಿತಿ, ಅನುಭವ ಮತ್ತು ತರಬೇತಿಯ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.35 ದೃಡೀಕರಣ ಪತ್ರವನ್ನು ನಾನೇ ತಯಾರಿಸಿದ್ದೇನೆ. ನೀವು ಹೇಳಿದಂತೆ ಫೋಟೋಗಳನ್ನು ಮತ್ತು ವಿಡಿಯೋವನ್ನು ವರ್ಗಾಯಿಸಿಕೊಂಡ ನಿಮ್ಮ ಮೊಬೈಲ್ ನ್ನು ತಂದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅದು ನನ್ನ ಹಳೆಯ ಮೊಬೈಲ್ ಎನ್ನುತ್ತಾರೆ.

10. ಫೋಟೋಗಳನ್ನು ತೆಗೆದ ಕ್ಯಾಮೆರ ಸೋನಿ ಕಂಪನಿಯದ್ದಾಗಿತ್ತು, ಆದರೆ ಅದರ ಸಿರಿಯಲ್ ನಂಬರ್ ನನಗೆ ಗೊತ್ತಿಲ್ಲ. ಫೋಟೋ ಮತ್ತು ವಿಡಿಯೋದಲ್ಲಿ ಸ್ಥಳದ ಚಿತ್ರಣ ಹೇಗಿರುತ್ತದೆಯೋ ಹಾಗೆ ಮೂಡಿ ಬರುತ್ತದೆ ಎಂದರೆ ಸರಿ. ತನಿಖಾಧಿಕಾರಿಗಳು ಕೃತ್ಯ ನಡೆದ ಸ್ಥಳದಲ್ಲಿ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮಹಜರನ್ನು ಮಾಡಿಕೊಂಡರು, ಆ ಸಮಯದಲ್ಲಿ ನಾನು ಫೋಟೋಗಳನ್ನು ತೆಗೆದು ವಿಡಿಯೋ ಚಿತ್ರಿಕರಿಸಿದ್ದೇನೆ. ಆ ಸಮಯಕ್ಕೆ ಪೂರ್ತಿಯಾಗಿ ಬೆಳಕು ಇತ್ತು ಎಂದರೆ ಸಾಕ್ಷಿ ಕೃತ್ಯ ನಡೆದ ಮನೆಯ ಒಳಗೆ ಸ್ವಲ್ಪ ಕತ್ತಲು ಇತ್ತು ಎನ್ನುತ್ತಾರೆ.

11. ನಿಪಿ.3 ರಿಂದ ಪಿ.5 ಫೋಟೋಗಳನ್ನು ರಾತ್ರಿ ವೇಳೆಯಲ್ಲಿ ತೆಗೆದ ರೀತಿ ಕಂಡುಬರುತ್ತದೆ ಎಂದರೆ ಸರಿಯಲ್ಲ. ನಿಪಿ.34 ಸಿಡಿ ಯಲ್ಲಿ ಇರುವ ವಿಡಿಯೋಗಳನ್ನು ರಾತ್ರಿ ವೇಳೆಯಲ್ಲಿ ಚಿತ್ರೀಕರಿಸಿದಂತೆ ಕಂಡುಬರುತ್ತದೆ ಎಂದರೆ ಸರಿಯಲ್ಲ. ಸದರಿ ವಿಡಿಯೋಗಳನ್ನು ನೋಡಿದರೆ ಅವುಗಳನ್ನು ಯಾವುದೇ ಡಿಜಟಲ್ ಕ್ಯಾಮೆರದಲ್ಲಿ ಚಿತ್ರಿಕರಿಸಿದಂತೆ ಕಂಡುಬರುವುದಿಲ್ಲ ಬದಲಿಗೆ ಮೊಬೈಲಿನಲ್ಲಿ ಚಿತ್ರೀಕರಿಸಿದಂತೆ ಕಂಡುಬರುತ್ತದೆ ಎಂದರೆ ಸರಿಯಲ್ಲ.

12. ಫೋಟೋಗಳನ್ನು ತೆಗೆಯಲು ಮತ್ತು ವಿಡಿಯೋ ಚಿತ್ರಿಕರಿಸಲು ತನಿಖಾಧಿಕಾರಿಗಳು ನನಗೆ ಲಿಖಿತವಾಗಿ ಆದೇಶಿಸಿರಲಿಲ್ಲ ಆದರೆ ಮೌಖಿಕವಾಗಿ ಆದೇಶಿಸಿದ್ದರು. ಆ ದಿನ ಬೆಳಿಗ್ಗೆ ರೋಲ್ ಕಾಲ್ ನಲ್ಲಿ ನಿಮ್ಮನ್ನು ಯಾವ ಕಾರ್ಯಕ್ಕೆ ನೇಮಿಸಲಾಗಿತ್ತು ಎಂದರೆ ಸಾಕ್ಷಿ ತನಿಖಾ ಸಹಾಯಕಿ ಕೆಲಸಕ್ಕೆ ಎನ್ನುತ್ತಾರೆ. ಹಿಂದಿನ ದಿನ ನೀವು ಯಾವ ಕರ್ತವ್ಯ ನಿರ್ವಹಿಸಿದ್ದೀರಿ ಎಂದರೆ ಸಾಕ್ಷಿ ತನಿಖಾ ಸಹಾಯಕಿ ಕೆಲಸ ಎನ್ನುತ್ತಾರೆ.

13. ನೀವು ಸ್ಥಳಕ್ಕೆ ಹೋಗಿದ್ದಾಗಿ, ಅಲ್ಲಿ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಕ್ಯಾಮೆರದಲ್ಲಿ ಫೋಟೋಗಳನ್ನು ತೆಗೆದು ವಿಡಿಯೋ ಚಿತ್ರಿಕರಿಸಿದ್ದಾಗಿ, ನಂತರ ಅವುಗಳನ್ನು ನಿಪಿ.34 ಸಿಡಿಗೆ ವರ್ಗಾಯಿಸಿ ನಿಪಿ.35 ದೃಢೀಕರಣ ಪತ್ರವನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 29-11-2021 ರಂದು ನೀವು ಫ್ರಾಸಾ.12 ರವರನ್ನು ಕರೆದುಕೊಂಡು ಹೋಗಿ

ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಗುರುತಿಸಿದ ಫೋಟೋ ಮತ್ತು ವಿಡಿಯೋವನ್ನು ಸೂರ್ಯ ಮುಳುಗಿದ ನಂತರ ಆತ ಉದಯಿಸುವ ಪೂರ್ವದಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದೇ ಇದ್ದರೂ ಸಹ ತನಿಖಾಧಿಕಾರಿಗಳ ಮಾತನ್ನು ಕೇಳಿ ನಿಪಿ.34 ಮತ್ತು ಪಿ.35 ರಂತೆ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.
ಸಹಿ/-

(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ